# ಅಂಚೆಚೀಟಿಗಳಲ್ಲಿ ಮಕ್ಕಳ ಕಲಾಕೃತಿಗಳು

**ಭಾರತೀಯ ಅಂಚೆ ಇಲಾಖೆ ಪ್ರತಿ ವರ್ಷ ಮಕ್ಕಳಿಗಾಗಿ ಚಿತ್ರರಚನೆ ಸ್ಪರ್ಧೆ ನಡೆಸುತ್ತದೆ. ಬಹುಮಾನಿತ ಚಿತ್ರಗಳು ಅಂಚೆಚೀಟಿಗಳ ರೂಪದಲ್ಲಿ ಪ್ರಕಟಗೊಳ್ಳುತ್ತವೆ.**

■ ಎನ್. ಜಗನ್ನಾಥ ಪ್ರಕಾಶ್







ಮಕ್ಕಳ ದಿನಾಚರಣೆ' ಅಂಗವಾಗಿ 'ಭಾರತೀಯ ಅಂಚೆ ಇಲಾಖೆ' ನಡೆಸುವ ಸ್ಪರ್ಧೆಗೆ ವಿಶೇಷ ಮಹತ್ವವಿದೆ. ಈ ಸ್ಪರ್ಧೆಯಲ್ಲಿ ಬಹುಮಾನ ಪಡೆಯುವ ಮಕ್ಕಳ ರಚನೆಗಳು ಅಂಚೆಚೀಟಿಗಳಾಗಿ ಮೂಡಿಬರುತ್ತವೆ.

ತಮ್ಮ ಸುತ್ತಮುತ್ತಲಿನ ಪರಿಸರ, ಪ್ರಾಣಿ–ಪಕ್ಷಿಗಳನ್ನು ಹಾಗೂ ಘಟನೆಗಳನ್ನು ಮಕ್ಕಳು ಸೂಕ್ಷ್ಮವಾಗಿ ಗಮನಿಸುತ್ತಾರೆ. ಆ ಘಟನೆಗಳಿಗೆ ಅಭಿವ್ಯಕ್ತಿಯ ರೂಪ ಕೊಡಲು ಚಿತ್ರಕಲೆ ಪ್ರೇರಣೆ ನೀಡುತ್ತದೆ. ಮಕ್ಕಳಲ್ಲಿ ಕಲ್ಪನೆ ಗರಿಗೆದರಲು ಕೂಡ ಚಿತ್ರಕಲೆ ನೆರವು ನೀಡುತ್ತದೆ.

ಅಂಚೆ ಇಲಾಖೆ ಕಳೆದ ಐವತ್ತು ವರ್ಷಗಳಿಂದಲೂ 'ಮಕ್ಕಳ ದಿನಾಚರಣೆ' ಸ್ಮರಣಾರ್ಥ ಅಂಚೆಚೀಟಿಗಳನ್ನು ಬಿಡುಗಡೆ ಮಾಡುತ್ತಿದೆ. ಆರಂಭದಲ್ಲಿ ಎರಡು ದಶಕಗಳ ಕಾಲ ಈ ಅಂಚೆಚೀಟಿಗಳಲ್ಲಿ ಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗುತ್ತಿತ್ತು. 1971ರಿಂದೀಚೆಗೆ ರಾಷ್ಟ್ರಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಇಲಾಖೆ ಏರ್ಪಡಿಸುತ್ತಿದ್ದು, ಈ ಸ್ಪರ್ಧೆಯಲ್ಲಿ ಬಹುಮಾನ ಪಡೆಯುವ ಚಿತ್ರಗಳನ್ನು ಅಂಚೆಚೀಟಿಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಬಹುಮಾನಿತ ಚಿತ್ರಗಳ ಚಿಣ್ಣರಿಗೆ ನಗದು ಬಹುಮಾನವೂ ಇದೆ.




ಮಕ್ಕಳ ರಚನೆಗಳನ್ನು ಒಳಗೊಂಡ ಅಂಚೆಚೀಟಿಗಳಿಗೆ ಅಪಾರ ಬೇಡಿಕೆಯಿದೆ. ದೇಶವಿದೇಶಗಳ ಅಂಚೆಚೀಟಿಗಳ ಸಂಗ್ರಾಹಕರು ಪ್ರತಿ ವರ್ಷವೂ ಈ ಅಂಚೆಚೀಟಿಗಳಿಗಾಗಿ ಕಾಯುತ್ತಿರುತ್ತಾರೆ.



ಮಕ್ಕಳ ಚಿತ್ರಕಲಾ ಸ್ಪರ್ಧೆಗಾಗಿ ಅಂಚೆ ಇಲಾಖೆ ಪ್ರತಿ ವರ್ಷವೂ ಬೇರೆ ಬೇರೆ ವಿಷಯಗಳನ್ನು ನೀಡುತ್ತದೆ. ಪರಿಸರ, ಅರಣ್ಯ, ಉಡುಗೆ ತೊಡುಗೆ, ಆಟಿಕೆಗಳು, ಗೆಳೆಯರು, ಆಟೋಟ – ಹೀಗೆ ಪ್ರತಿ ವರ್ಷ ಬೇರೆ ಬೇರೆ ವಿಷಯಗಳನ್ನು ನೀಡಲಾಗುತ್ತದೆ. ಈ ವರ್ಷ 'ಮಕ್ಕಳ ದಿನಾಚರಣೆ' ಸಂದರ್ಭದಲ್ಲಿ ಚಿತ್ರಕಲಾ ಸ್ಪರ್ಧೆಗಾಗಿ ನೀಡಿರುವ ವಿಷಯ – 'ಕೋಮು ಸೌಹಾರ್ದ'. ಎಷ್ಟು ಅರ್ಥಪೂರ್ಣ ವಿಷಯವಲ್ಲವೇ? ■


SDP AYURVEDA

ಎಸ್‌ಡಿಪಿ ದಂತ ಚೂರ್ಣ

ನೈಸರ್ಗಿಕ ಆಯುರ್ವೇದ ದಂತಮಂಜನ

॥ ಪ್ರಾತರ್ಭುಕ್ತ್ವಾಚ ಮೃದ್ವಗ್ರಂ ಕಷಾಯ ಕಟು ತಿಕ್ತಕಂ॥ (ವಾಗ್ಭಟ)

ಚೊಗರು, ಖಾರ, ಕಹಿ ಇರುವ
ಗಿಡಮೂಲಿಕೆಗಳಿಂದ ಹಲ್ಲು ಉಜ್ಜಿದರೆ
ಅಲ್ಲಾಡುವ ಹಲ್ಲುಗಳು ಸ್ಥಿರವಾಗುವುದು.
ಒಸಡಿನ ರಕ್ತಸ್ರಾವ ನಿಲ್ಲುವುದು.
ಬಾಯಿವಾಸನೆ ನಿವಾರಿಸುವುದು.
ಹಲ್ಲು ಜುಂಗುಟ್ಟುವುದನ್ನು ತಡೆಯುವುದು.

ಆರೋಗ್ಯವಂತ ಹಲ್ಲುಗಳಿಗಾಗಿ
ಎಸ್‌ಡಿಪಿ ದಂತಚೂರ್ಣ ಉಪಯೋಗಿಸಿ




Proprietary Ayurvedic Medicine

ಎಸ್‌ಡಿಪಿ ರೆಮಿಡೀಸ್ & ರಿಸರ್ಚ್ ಸೆಂಟರ್
ಪರ್ಲಡ್ಕ, ಪುತ್ತೂರು, ದ.ಕ.
ಇಮೇಲ್: sdpayurveda@gmail.com
Customer Care No.: +91 99004 09184